ಕರ್ನಾಟಕ ಸರ್ಕಾರ ಸಿ ಆರ್ ಪಿ ಸಿ 67

ಹೇಳಿಕೆ ಹಾಳೆ

(ಆರ್.ಪಿ.ಸಂಖ್ಯೆ **57**)

ನಮೂನೆ ಸಂಖ್ಯೆ 4

## ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಸಿಂಧನೂರು.

## ಸಿ.ಸಿ.ನಂ.1326/2020

| | | | |
|---|---|---|---|
| **ಸಾಕ್ಷಿದಾರರ ಹೆಸರು** | **ಸೋಮಶೇಖರ್** | | |
| **ತಂದೆಃಹೆಸರು** | **ಷಣ್ಮುಖಪ್ಪ** | **ಪಿಡಬ್ಲೂಃ** | **10** |
| **ವಯಸ್ಸು** | **42 ವರ್ಷ** | **ಸಿಡಬ್ಲೂಃ** | **14** |
| **ಉದ್ಯೋಗಃ** | **ಪಿ. ಐ.** | | |
| **ವಾಸ ಸ್ಥಳಃ** | **ಮಾನ್ವಿ ಪೋಲೀಸ್ ಠಾಣೆ.** | | |

**ದಿನಾಂಕ 08-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃಃ**

ನಾನು 04-03-2019 ರಿಂದ 17-06-2019 ರವರೆಗೆ ಸಿಂಧನೂರು ನಗರ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯ ನಿರ್ವಹಿಸಿದ್ದೇನೆ.

ಈ ಪ್ರಕರಣದ ಕಡತವನ್ನು ದಿ.04-03-2019 ರಂದು ಚಾಸಾ-13 ರವರಿಂದ ವಹಿಸಿಕೊಂಡು, ಪರಿಶೀಲಿಸಿದೆನು.

ದಿ.28-03-2019 ರಂದು ಹನುಮಂತಪ್ಪರವರಿಗೆ ಸಾಲ ಮಂಜೂರಾತಿ ಮಾಡಿದ ಫೀಲ್ಡ್ ಆಫೀಸರ್ & ಬ್ಯಾಂಕ್ ಮ್ಯಾನೇಜರ್ ರವರ ಸದ್ಯದ ವಿಳಾಸ ಹಾಗೂ ಎಸ್ ಬಿ ಐ ಬ್ಯಾಂಕ್ ಮ್ಯಾನೇಜರ್ ರವರಿಗೆ ನೋಟೀಸು ನೀಡಿರುತ್ತೇನೆ. ದಿ.12-04-2019 ರಂದು ಎಸ್ ಬಿ ಐ ಬ್ಯಾಂಕ್ ಮ್ಯಾನೇಜರ್ ರವರಿಂದ ಉತ್ತರವನ್ನು ಪಡೆದಿರುತ್ತೆನೆ. ಸಾಕ್ಷಿಯು ನಿಪಿ-12 ರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-12 ಬಿ ಎಂದು ಗುರುತಿಸಲಾಯಿತು.

ದಿ.09-05-2019 ರಂದು ಎಸ್ ಬಿ ಐ ಬ್ಯಾಂಕ್ ಮ್ಯಾನೇಜರ್, ಬೆಂಗಳೂರು ರವರಿಗೆ ನೋಟೀಸು ನೀಡಲು ನನ್ನ ಸಿಬ್ಬಂದಿಯನ್ನು ಕಳಿಸಿರುತ್ತೇನೆ. ದಿ.14-05-2019 ರಂದು ಎಸ್ ಬಿ ಐ ಬ್ಯಾಂಕ್ ಮ್ಯಾನೇಜರ್, ಬೆಂಗಳೂರು ರವರು ಠಾಣೆಗೆ ಬಂದು ಹಾಜರಾಗಿದ್ದು, ಅವರ ಹೇಳಿಕೆ ಪಡೆದಿರುತ್ತೇನೆ. ಸಾಕ್ಷಿಯು ಕಡತದಲ್ಲಿರುವ ದಾಖಲೆಗಳನ್ನು ನೋಡಿ ಗುರುತಿಸಿರುತ್ತಾರೆ.

ದಿ.06-06-2019 ರಂದು ನನ್ನ ಸಿಬ್ಬಂದಿಯನ್ನು ಚಾಸಾ-12 ರವರಿಗೆ ನೋಟೀಸು ನೀಡಲು ಕಳಿಸಿದ್ದೆ. ಅವರು ಇಲ್ಲದ ಕಾರಣ ನೋಟೀಸು ಜಾರಿಯಾಗಿರುವುದಿಲ್ಲ. ದಿ.17-06-2019 ರಂದು ಮುಂದಿನ ತನಿಖೆಯನ್ನು ಚಾಸಾ-15 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದಃ**

1. ನಿಪಿ-7 ರಲ್ಲಿರುವ ಫೋಟೋದ ಮೇಲೆ ಸೀಲು & ಸಹಿ ಇಲ್ಲ ಎಂದರೆ ಸರಿ. ನಿಪಿ-8 ರಲ್ಲಿ ಫೋಟೋ ಎಂದು ಇರುವ ಕಾಲಂ ನಲ್ಲಿ ಫೋಟೋ ಅಂಟಿಸಿಲ್ಲ ಎಂದರೆ ಸರಿ.

2. ದಿ.07-06-2004 ರಿಂದ 21-10-2004 ರವರೆಗೆ ಚಾಸಾ-11 ರವರು ಕಾರ್ಯನಿರ್ವಹಿಸಿರುತ್ತಾರೆ.

3. ನಿಪಿ-7 ರಿಂದ 13 ದಾಖಲೆ 2004 ರಲ್ಲಿ ಆಗಿದ್ದು ಎಂದರೆ ಸರಿ. ಚಾಸಾ-11 ರವರು 2004 ರಲ್ಲಿ ಕರ್ತವ್ಯ ನಿರ್ವಹಿಸಿಲ್ಲ ಎಂದರೆ ಸರಿಯಲ್ಲ. ಚಾಸಾ-11 ರವರು ನನ್ನ ಮುಂದೆ ಸಹಿ ಮಾಡಿದ್ದರು ಎಂದು ಹೇಳಿರುವುದಿಲ್ಲ. ಚಾಸಾ-11 & 12 ರವರನ್ನು ಮೊದಲು ಪ್ರ.ವ. ವರದಿಯಲ್ಲಿ ಆರೋಪಿಗಳನ್ನಾಗಿ ಮಾಡಿದ್ದರು ಎಂದರೆ ಸಾಕ್ಷಿಯು ಅವರ ಹೆಸರುಗಳನ್ನು ಹಾಕಿರಲಿಲ್ಲ, ಆದರೆ ಹುದ್ದೆಗಳನ್ನು ಬರೆದಿದ್ದರು ಎನ್ನುತ್ತಾರೆ. ಅಂದರೆ ಆ ಕಾಲಕ್ಕೆ ಇದ್ದ ಫೀಲ್ಡ್ ಆಫೀಸರ್ & ಬ್ಯಾಂಕ್ ಮ್ಯಾನೇಜರ್ ಚಾಸಾ-11 & 12 ರವರು ಎಂದರೆ ಸರಿ.

4. ಚಾಸಾ-11 & 12 ರವರು ಮೊದಲು ಆರೋಪಿತರಾಗಿದ್ದು, ಈ ಪ್ರಕರಣದಿಂದ ತಪ್ಪಿಸಿಕೊಳ್ಳಲು ನಿಪಿ-7 ರಿಂದ 13 ನ್ನು ಸೃಷ್ಟಿಸಿಕೊಂಡು ತಂದು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನೋಟೀಸಿನ ಪ್ರತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿಲ್ಲ ಎಂದರೆ ಸಾಕ್ಷಿಯು ನನ್ನ ಫೈಲ್‌ನಲ್ಲಿದೆ ಎನ್ನುತ್ತಾರೆ. ಚಾಸಾ-11 & 12 ರವರಿಗೆ ನೀವು ಯಾವುದೇ ನೋಟೀಸು ಕೊಟ್ಟಿಲ್ಲ, ಅವರು ನಿಮ್ಮ ಮುಂದೆ ಹಾಜರಾಗಿ ಯಾವುದೇ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ.

5. ಆರೋಪಿ ಯಾವುದೇ ತಪ್ಪು ಮಾಡದೇ ಇದ್ದರೂ ಸಹ ಚಾಸಾ-11 & 12 ರವರ ಮಾತು ಕೇಳಿ ಸುಳ್ಳು ತನಿಖೆ ಮಾಡಿದ್ದೀರಿ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಸಿಂಧನೂರು.**